7

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಸಭೆ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 20/6/2020

# ರಾಜ್ಯಸಭೆಯಲ್ಲಿ ಬಿಜೆಪಿ ಮೇಲುಗೈ

» 19 ಸ್ಥಾನಗಳಿಗೆ ಚುನಾವಣೆ

» 8ರಲ್ಲಿ ಬಿಜೆಪಿಗೆ ಗೆಲುವು

**ನವದೆಹಲಿ:** ರಾಜ್ಯಸಭೆಯ 19 ಸ್ಥಾನಗಳಿಗೆ ಶುಕ್ರವಾರ ಹತ್ತು ರಾಜ್ಯಗಳಿಂದ ನಡೆದ ಚುನಾವಣೆಗಳಲ್ಲಿ ಬಿಜೆಪಿ 8, ಕಾಂಗ್ರೆಸ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ತಲಾ 4ರಲ್ಲಿ ಗೆಲುವು ಸಾಧಿಸಿವೆ. 3 ಸ್ಥಾನ ಇತರ ಪಕ್ಷಗಳ ಪಾಲಾಗಿದೆ. ಕಾಂಗ್ರೆಸ್‌ನ ನಾಯಕ ದಿಗ್ವಿಜಯ ಸಿಂಗ್, ಬಿಜೆಪಿಯ ಜ್ಯೋತಿರಾದಿತ್ಯ ಸಿಂಧಿಯಾ ಮಧ್ಯಪ್ರದೇಶದದಿಂದ ಗೆಲುವು ಸಾಧಿಸಿದ್ದಾರೆ. ಬಿಜೆಪಿಯ ಇನ್ನೊಬ್ಬ ಅಭ್ಯರ್ಥಿ ಸುಮೇರ್ ಸಿಂಗ್ ಸೋಳಂಕಿ ಕೂಡ ಗೆದ್ದಿದ್ದಾರೆ. ಇದು ಸಿಂಗ್‌ಗೆ ಸತತ 2ನೇ ಗೆಲುವಾದರೆ ಇತ್ತೀಚೆಗೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಸಿಂಧಿಯಾ ಮೊದಲ ಬಾರಿಗೆ ಮೇಲ್ಮನೆ ಪ್ರವೇಶಿಸಿದ್ದಾರೆ. ರಾಜಸ್ಥಾನದಲ್ಲಿ ಕಾಂಗ್ರೆಸ್ 2 ಸ್ಥಾನ, ಪ್ರತಿಪಕ್ಷ ಬಿಜೆಪಿ ಒಂದರಲ್ಲಿ ಗೆದ್ದಿದೆ. ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್, ನೀರಜ್ ಡಾಂಗಿ, ಬಿಜೆಪಿಯ ರಾಜೇಂದ್ರ ಗೆಹ್ಲೋಟ್ ರಾಜಸ್ಥಾನ ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾದರು. ○ಪುಟ 8

# ರಾಜ್ಯಸಭೆಯಲ್ಲಿ ಮೇಲುಗೈ ಸಾಧಿಸಿದ ಬಿಜೆಪಿ

ಮೊದಲನೇ ಪುಟದಿಂದ...
ಗುಜರಾತ್‌ನಲ್ಲಿ ಒಟ್ಟು ನಾಲ್ಕು ಸ್ಥಾನದಲ್ಲಿ ಬಿಜೆಪಿ 3 ಮತ್ತು ಕಾಂಗ್ರೆಸ್ ಒಂದು ಸ್ಥಾನದಲ್ಲಿ ಜಯಗಳಿಸಿದೆ. ಕಳೆದ ಫೆಬ್ರವರಿಯಲ್ಲಿ ಘೋಷಣೆಯಾದ 55 ಸ್ಥಾನಗಳ ಪೈಕಿ 37 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ಉಳಿದ 18 ಸ್ಥಾನಗಳಿಗೆ ಮಾರ್ಚ್ ಕಡೆಯ ವಾರದಲ್ಲಿ ಚುನಾವಣೆ ನಡೆಯಬೇಕಿತ್ತು. ಆದರೆ, ಕರೊನಾ ಹಾವಳಿ ಕಾರಣ ಲಾಕ್‌ಡೌನ್ ಘೋಷಣೆ ಮಾಡಿದ್ದರಿಂದ ಚುನಾವಣಾ ಆಯೋಗ ಚುನಾವಣೆಯನ್ನು ಮುಂದೂಡಿತು. ಈಗ ಜೂನ್‌ನಲ್ಲಿ ಕರ್ನಾಟಕದ ನಾಲ್ಕು ಮತ್ತು ಮಿಜೋರಾಂ ಹಾಗೂ ಅರುಣಾಚಲ ಪ್ರದೇಶದ ತಲಾ ಒಂದು ಸ್ಥಾನ ಸೇರಿ 24 ಸ್ಥಾನಗಳಿಗೆ ಚುನಾವಣೆ ನಡೆಸಿತು. ಇದರಲ್ಲಿ ಕರ್ನಾಟಕದ ನಾಲ್ಕು ಮತ್ತು ಅರುಣಾಚಲದ ಒಂದು ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು.

**ಪಿಪಿಇ ಸೂಟ್ ಧರಿಸಿ ಮತದಾನ:** ಕೋವಿಡ್-19 ರೋಗದಿಂದ ಬಳಲುತ್ತಿರುವ ಮಧ್ಯ ಪ್ರದೇಶದ ಕಾಂಗ್ರೆಸ್ ಶಾಸಕ ಕುಣಾಲ್ ಚೌಧರಿ ಪಿಪಿಇ ಸೂಟ್ ಧರಿಸಿ, ಮತದಾನ ಮಾಡಿದರು. ಕೋವಿಡ್-19 ಕಾಯಿಲೆ ಪೀಡಿತ ಶಾಸಕನಿಗೆ ಮತದಾನದಲ್ಲಿ ಭಾಗವಹಿಸಲು ಅವಕಾಶ ನೀಡಿದ ಚುನಾವಣೆ ಆಯೋಗದ ಕ್ರಮವನ್ನು ಬಿಜೆಪಿ ಖಂಡಿಸಿದೆ. ಇದು ಸಾಂಕ್ರಾಮಿಕ ರೋಗ ನಿಯಂತ್ರಣ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಬಿಜೆಪಿ ನಾಯಕ ಹಿತೇಶ್ ಬಾಜಪೇಯಿ ಅಭಿಪ್ರಾಯಪಟ್ಟಿದ್ದಾರೆ.

**ಆಂಬುಲೆನ್ಸ್‌ನಲ್ಲಿ ಬಂದ ಶಾಸಕ:** ಗುಜರಾತ್‌ನಲ್ಲಿ ಅನಾರೋಗ್ಯಪೀಡಿತ ಬಿಜೆಪಿ ಶಾಸಕ ಕೇಸರಿಸಿಂಹ ಜೇಸಂಗಭಾಯ್ ಸೋಳಂಕಿ ಆಂಬುಲೆನ್ಸ್‌ನಲ್ಲಿ ಆಗಮಿಸಿ ರಾಜ್ಯಸಭೆ ಚುನಾವಣೆಯಲ್ಲಿ ಮತದಾನ ಮಾಡಿದರು. ಅವರು ನೇರವಾಗಿ ಆಸ್ಪತ್ರೆಯಿಂದ ವಿಧಾನ ಸಭೆ ಸಂಕೀರ್ಣಕ್ಕೆ ಆಗಮಿಸಿ ಮತ ಚಲಾಯಿಸಿದರು.

**ರಾಜ್ಯಸಭೆಯ ಒಟ್ಟು 19 ಸ್ಥಾನಕ್ಕೆ ಚುನಾವಣೆ**

| | | |
|---|---|---|
| ಗುಜರಾತ್ | ಬಿಜೆಪಿ-3, ಕಾಂಗ್ರೆಸ್-1 | ಒಟ್ಟು 4 |
| ಆಂಧ್ರಪ್ರದೇಶ | ವೈಎಸ್‌ಆರ್ ಕಾಂಗ್ರೆಸ್-4 | ಒಟ್ಟು 4 |
| ರಾಜಸ್ಥಾನ | ಕಾಂಗ್ರೆಸ್-2, ಬಿಜೆಪಿ-1 | ಒಟ್ಟು 3 |
| ಜಾರ್ಖಂಡ್ | ಜೆಎಂಎಂ-1, ಬಿಜೆಪಿ-1 | ಒಟ್ಟು 2 |
| ಮಧ್ಯಪ್ರದೇಶ | ಬಿಜೆಪಿ-2, ಕಾಂಗ್ರೆಸ್-1 | ಒಟ್ಟು 3 |
| ಮಣಿಪುರ | ಬಿಜೆಪಿ-1 | ಒಟ್ಟು 1 |
| ಮೇಘಾಲಯ | ಎನ್‌ಪಿಪಿ-1 | ಒಟ್ಟು 1 |
| ಮಿಜೋರಾಂ | ಎಂಎನ್‌ಎಫ್-1 | ಒಟ್ಟು 1 |